**Akashvani : Bangalore**
**National Bulletin In Kannada**
**20.12.2024 / 19.35 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**20.12.2024 / 19.35 hrs**

**<><*<><>*><>**

ಮುಖ್ಯಾಂಶಗಳು

**೧. ಸಂಸತ್ತಿನ ಉಭಯ ಸದನಗಳ ಕಲಾಪ ಅನಿರ್ದಿಷ್ಟಾವಧಿಗೆ ಮುಂದೂಡಿಕೆ**

**೨. ಲೋಕಸಭೆಯಲ್ಲಿ ಶೇಕಡ ೫೭, ರಾಜ್ಯಸಭೆಯಲ್ಲಿ ಶೇಕಡ ೪೦ ರಷ್ಟು ಉತ್ಪಾದಕತೆ ದಾಖಲು**

**೩. ಒಂದು ರಾಷ್ಟ್ರ-ಒಂದು ಚುನಾವಣೆ ವಿಧೇಯಕ ಸಂಸತ್ತಿನ ಜಂಟಿ ಪರಿಶೀಲನಾ ಸಮಿತಿಗೆ ವರ್ಗಾವಣೆ**

**೪. ರಾಜಸ್ಥಾನದಲ್ಲಿ ಗ್ಯಾಸ್ ಟ್ಯಾಂಕರ್ ಬೆಂಕಿ ಅವಘಡ; ಮೃತರ ಸಂಖ್ಯೆ ೯ ಕ್ಕೆ ಏರಿಕೆ**

**<><*<><>*><>**

ಪ್ರತಿಪಕ್ಷಗಳ ಗದ್ದಲ, ಕೋಲಾಹಲದ ನಡುವೆ ಸಂಸತ್ತಿನ ಉಭಯ ಸದನಗಳ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ. ಇಂದು ಲೋಕಸಭೆಯಲ್ಲಿ ಸದನ ಸೇರಿದಾಗ ಕೇಂದ್ರ ಸಚಿವ ಅಮಿತ್ ಶಾ ಅವರು ಡಾ.ಬಿ.ಆರ್.ಅಂಬೇಡ್ಕರ್ ಅವರ ಕುರಿತು ಮಾಡಿರುವ ವಿಚಾರವನ್ನು ಪ್ರತಿಪಕ್ಷ ಸದಸ್ಯರು ಪ್ರಸ್ತಾಪಿಸಿ ಘೋಷಣೆ ಕೂಗಿದರು. ಸ್ಪೀಕರ್ ಓಂ ಬಿರ್ಲಾ ಅವರು ಸದನದ ನಿಯಮಾವಳಿಗಳನ್ನು ಪರಿಪಾಲಿಸುವಂತೆ ಮನವಿ ಮಾಡಿದರು. ನಿಯಮ ಮೀರಿ ವರ್ತಿಸಿದರೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ನಂತರ ಗದ್ದಲ ನಿಲ್ಲದೇ ಇದ್ದಾಗ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು. ಕಲಾಪಕ್ಕೆ ಪದೆ ಪದೇ ಅಡ್ಡಿಯಾಗುತ್ತಿರುವ ಬಗ್ಗೆ ಸ್ಪೀಕರ್ ಓಂ ಬಿರ್ಲಾ ಅಸಮಾಧಾನ ವ್ಯಕ್ತಪಡಿಸಿದರು. ರಾಜ್ಯಸಭೆಯಲ್ಲೂ ಗದ್ದಲ ಮುಂದುವರಿಯಲಾಯಿತು. ಸಭಾಪತಿ ಜಗದೀಪ್ ಧನ್ಕರ್ ಅವರು ಸದಸ್ಯರು ಸಂಸದೀಯ ಘನತೆ, ಗೌರವನ್ನು ಎತ್ತಿ ಹಿಡಿಯಬೇಕು. ಪದೇ ಪದೆ ಕಲಾಪಕ್ಕೆ ಅಡ್ಡಿಪಡಿಸುವುದು ಉತ್ತಮ ನಡವಳಿಕೆಯಲ್ಲ. ಇದರಿಂದ ಸಾರ್ವಜನಿಕವಾಗಿ ಅವಹೇಳನಕ್ಕೆ ಒಳಗಾಗಬೇಕಾಗುತ್ತದೆ ಎಂದರು.

**<><*<><>*><>**

ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಲೋಕಸಭೆಯು ಶೇಕಡ ೫೭ ರಷ್ಟು ಉತ್ಪಾದಕತೆಯನ್ನು ದಾಖಲಿಸಿದರೆ, ರಾಜ್ಯಸಭೆಯು ಶೇಕಡ ೪೦ ರಷ್ಟು ಉತ್ಪಾದಕತೆಯನ್ನು ದಾಖಲಿಸಿದೆ. ನವದೆಹಲಿಯಲ್ಲಿಂದು ಅಧಿವೇಶನದ ಮುಕ್ತಾಯದ ನಂತರ ಮಾಧ್ಯಮಗಳಿಗೆ ಮಾಹಿತಿ ನೀಡಿದ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಉಭಯ ಸದನಗಳ ಉತ್ಪಾದಕತೆ ತಗ್ಗಿದೆ ಮತ್ತು ಪ್ರತಿಯೊಬ್ಬರೂ ಅದರ ಬಗ್ಗೆ ಯೋಚಿಸಬೇಕು. ವಿರೋಧ ಪಕ್ಷದ ಸಂಸದರು ಸೃಷ್ಟಿಸಿದ ಕೋಲಾಹಲಗಳಿಂದ ಉಭಯ ಸದನಗಳ ಮೇಲೆ ಪರಿಣಾಮ ಬೀರಿದೆ ಎಂದರು. ಅಧಿವೇಶನದಲ್ಲಿ ನಾಲ್ಕು ವಿಧೇಯಕಗಳನ್ನು ಲೋಕಸಭೆ ಮತ್ತು ಮೂರು ವಿಧೇಯಕಗಳನ್ನು ರಾಜ್ಯಸಭೆಯಲ್ಲಿ ಅಂಗೀಕರಿಸಲಾಯಿತು ಎಂದು ಸಚಿವರು ತಿಳಿಸಿದರು. ಲೋಕಸಭೆಯಲ್ಲಿ ಸುಮಾರು ೧೫ ಗಂಟೆಗೂ ಹೆಚ್ಚು ಕಾಲ ಚರ್ಚೆ ನಡೆಯಿತು. ಅದರಲ್ಲಿ ೬೨ ಸದಸ್ಯರು ಭಾಗವಹಿಸಿದ್ದರು ಮತ್ತು ಪ್ರಧಾನಿ ನರೇಂದ್ರ ಮೋದಿ ಉತ್ತರಿಸಿದರು. ರಾಜ್ಯಸಭೆಯಲ್ಲಿ ೮೦ ಸದಸ್ಯರು ಕಲಾಪದಲ್ಲಿ ೧೭ ಗಂಟೆಗಳ ಕಾಲ ಸದನದಲ್ಲಿ ತೊಡಗಿಸಿಕೊಂಡರು ಎಂದು ಮಾಹಿತಿ ನೀಡಿದರು. ಇದೇ ವೇಳೆ ನಿನ್ನೆ ಸಂಸತ್ ಭವನದಲ್ಲಿ ಇಬ್ಬರು ಬಿಜೆಪಿ ಸಂಸದರು ಗಾಯಗೊಂಡ ಘಟನೆಯನ್ನು ಸಚಿವರು ಖಂಡಿಸಿದರು.

**<><*<><>*><>**

ಒಂದು ರಾಷ್ಟ್ರ - ಒಂದು ಚುನಾವಣೆಗೆ ಸಂಬಂಧಿಸಿದ ಎರಡು ವಿಧೇಯಕಗಳನ್ನು ಸಂಸತ್ತಿನ ಜಂಟಿ ಪರಿಶೀಲನಾ ಸಮಿತಿಗೆ ಒಪ್ಪಿಸಲಾಗಿದೆ. ಸಮಿತಿಯಲ್ಲಿ ೨೭ ಮಂದಿ ಲೋಕಸಭೆ ಮತ್ತು ೧೨ ಮಂದಿ ರಾಜ್ಯಸಭಾ ಸದಸ್ಯರಿದ್ದಾರೆ. ಇಂದು ಸದನ ಸಮಾವೇಶಗೊಳ್ಳುತ್ತಿದ್ದಂತೆ ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೆಘ್ವಾಲ್ ಅವರು ಸಂವಿಧಾನದ ೧೨೫ ನೇ ತಿದ್ದುಪಡಿ ಮಸೂದೆ -೨೦೨೪ ಮತ್ತು ಕೇಂದ್ರಾಡಳಿತ ಪ್ರದೇಶಗಳ ಕಾನೂನು ತಿದ್ದುಪಡಿ ಮಸೂದೆ -೨೦೨೪ ಅನ್ನು ಮಂಡಿಸಿದರು. ನಂತರ ಮಸೂದೆಗಳನ್ನು ಸಂಸತ್ತಿನ ಜಂಟಿ ಪರಿಶೀಲನಾ ಸಮಿತಿಗೆ ಒಳಪಡಿಸಲಾಯಿತು. ಸಮಿತಿ ಮುಂದಿನ ಸಂಸತ್ ಅಧಿವೇಶನದ ಮೊದಲ ದಿನದ ವೇಳೆಗೆ ತನ್ನ ವರದಿ ಸಲ್ಲಿಸಲಿದೆ. ಸಮಿತಿಯಲ್ಲಿ ಬಿಜೆಪಿಯ ಪಿಪಿ ಚೌಧರಿ, ಅರುಣ್ ಸಿಂಗ್ ಠಾಕೂರ್ ಮತ್ತು ಪರಶೋತ್ತಮ್ ರೂಪಾಲ, ಕಾಂಗ್ರೆಸ್ ನ ಪ್ರಿಯಾಂಕ ಗಾಂಧಿ, ಮನೀಶ್ ತಿವಾರಿ, ಟಿಎಂಸಿಯ ಕಲ್ಯಾಣ್ ಬ್ಯಾನರ್ಜಿ, ಎನ್.ಸಿ.ಪಿಯ ಸುಪ್ರಿಯ ಸುಳೆ ಮತ್ತಿತರೆ ಲೋಕಸಭಾ ಸದಸ್ಯರು ಸಮಿತಿ ಸದಸ್ಯರಾಗಿದ್ದಾರೆ.

<><*<><>*><>

ಪ್ರಸಕ್ತ ಹಣಕಾಸು ವರ್ಷದಲ್ಲಿ ಮಹಿಳೆಯರು ಮತ್ತು ಬಾಲಕಿಯರಿಗಾಗಿ ಸರ್ಕಾರವು ೩.೨೭ ಲಕ್ಷ ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದೆ. ಇದು ಕಳೆದ ಆರ್ಥಿಕ ವರ್ಷಕ್ಕಿಂತ ಶೇಕಡಾ ೩೭ ರಷ್ಟು ಹೆಚ್ಚಳವಾಗಿದೆ ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ರಾಜ್ಯ ಸಚಿವೆ ಸಾವಿತ್ರಿ ಠಾಕೂರ್ ತಿಳಿಸಿದ್ದಾರೆ. ಲೋಕಸಭೆಯಲ್ಲಿ ಇಂದು ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರ ನೀಡಿದ ಅವರು, ಕೇಂದ್ರ ಬಜೆಟ್‌ನಲ್ಲಿ ಮಹಿಳಾ ಬಜೆಟ್‌ನ ಪಾಲು ೨೦೨೩-೨೪ರಲ್ಲಿ ೫.೩ ಪ್ರತಿಶತದಿಂದ ಪ್ರಸಕ್ತ ಹಣಕಾಸು ವರ್ಷದಲ್ಲಿ ೬.೮ ಪ್ರತಿಶತಕ್ಕೆ ಏರಿದೆ. ಇದು ಪ್ರಾರಂಭದಿಂದಲೂ ಅತ್ಯಧಿಕವಾಗಿದೆ ಎಂದು ಅವರು ಹೇಳಿದರು.

<><*<><>*><>

ದೇಶದಾದ್ಯಂತ ನಾಗರಿಕರಿಗೆ ಅವರ ಮನೆ ಬಾಗಿಲಿಗೆ ನ್ಯಾಯ ಒದಗಿಸಲು ೧೧ ರಾಜ್ಯಗಳಲ್ಲಿ ೩೧೩ ಗ್ರಾಮ ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತಿವೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಲೋಕಸಭೆಯಲ್ಲಿ ಇಂದು ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರ ನೀಡಿದ ಕೇಂದ್ರ ಕಾನೂನು ಮತ್ತು ನ್ಯಾಯಾಂಗ ಖಾತೆ ಸಹಾಯಕ ಸಚಿವ ಅರ್ಜುನ್ ರಾಮ್ ಮೇಘವಾಲ್, ಸಾಮಾಜಿಕ, ಆರ್ಥಿಕ ಅಥವಾ ಇತರೆ ಕಾರಣದಿಂದ ಯಾವುದೇ ನಾಗರಿಕರಿಗೆ ನ್ಯಾಯವನ್ನು ಪಡೆಯುವ ಅವಕಾಶಗಳನ್ನು ನಿರಾಕರಿಸಲಾಗುವುದಿಲ್ಲ ಎನ್ನುವುದನ್ನು ಗ್ರಾಮ ನ್ಯಾಯಾಲಯಗಳ ಕಾಯಿದೆ ಖಚಿತಪಡಿಸುತ್ತದೆ ಎಂದು ಹೇಳಿದರು. ದೇಶದ ೧೫ ರಾಜ್ಯಗಳು, ೪೮೮ ಗ್ರಾಮ ನ್ಯಾಯಾಲಯಗಳನ್ನು ಸ್ಥಾಪಿಸುವ ಮೂಲಕ ಗ್ರಾಮ ನ್ಯಾಯಾಲಯ ಯೋಜನೆಯನ್ನು ಜಾರಿಗೆ ತಂದಿವೆ ಎಂದು ಸಚಿವ ಅರ್ಜುನ್ ರಾಮ್ ಮೇಘವಾಲ್ ತಿಳಿಸಿದರು.

<><*<><>*><>

ಕೇಂದ್ರ ಸರ್ಕಾರ ಹಲವು ವರ್ಷಗಳಿಂದ ಕೈಗೊಂಡಿರುವ ವಿವಿಧ ಸುರಕ್ಷತಾ ಕ್ರಮಗಳಿಂದಾಗಿ, ರೈಲು ಅಪಘಾತಗಳು ೨೦೧೪-೧೫ ರಲ್ಲಿ ೧೩೫ ರಿಂದ ೨೦೨೩-೨೪ ರಲ್ಲಿ ೪೦ ಕ್ಕೆ ಇಳಿದಿದೆ ಎಂದು ರೈಲ್ವೇ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ. ರಾಜ್ಯಸಭೆಯಲ್ಲಿಪ್ರಶ್ನೆಯೊಂದಕ್ಕೆ ಲಿಖಿತ ಉತ್ತರ ನೀಡಿದ ಅವರು, ೨೦೦೪-೧೪ರ ಅವಧಿಯಲ್ಲಿ ೧ ಸಾವಿರದ ೭೧೧ ರೈಲು ಅಪಘಾತಗಳು ಸಂಭವಿಸಿದ್ದು, ವರ್ಷಕ್ಕೆ ಸರಾಸರಿ ೧೭೧ ಅಪಘಾತಗಳು ಸಂಭವಿಸಿವೆ. ಇದು ೨೦೧೪-೨೪ರ ಅವಧಿಯಲ್ಲಿ ೬೭೮ ಕ್ಕೆ ಇಳಿದಿದೆ. ೨೦೧೪-೨೪ರ ಅವಧಿಯಲ್ಲಿ ಎನ್‌ಡಿಎ ಆಡಳಿತದಲ್ಲಿ ಅಪಘಾತಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದ್ದು, ವರ್ಷಕ್ಕೆ ಸರಾಸರಿ ೬೮ ಅಪಘಾತಗಳು ಸಂಭವಿಸಿವೆ ಎಂದು ಮಾಹಿತಿ ನೀಡಿದರು. ಯುಪಿಎ ಆಡಳಿತಕ್ಕೆ ಹೋಲಿಸಿದರೆ, ಎನ್‌ಡಿಎ ಆಡಳಿತದಲ್ಲಿ ರೈಲು ಅಪಘಾತಗಳಲ್ಲಿ ಶೇಕಡಾ ೬೦ ರಷ್ಟು ತಗ್ಗಿದೆ ಎಂದು ಅವರು ಹೇಳಿದರು.

<><*<><>*><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ತೆಲಂಗಾಣದ ಸಿಕಂದರಾಬಾದ್‌ನಲ್ಲಿಂದು ರಕ್ಷಣಾ ನಿರ್ವಹಣಾ ಕಾಲೇಜಿನ ಸಮಾರಂಭದಲ್ಲಿ ಪಾಲ್ಗೊಂಡು 'ಪ್ರೆಸಿಡೆಂಟ್ಸ್ ಕಲರ್ಸ್' ಪ್ರಶಸ್ತಿ ಪ್ರದಾನ ಮಾಡಿದರು. ಈ ವೇಳೆ ಮಾತನಾಡಿದ ಅವರು, ದೇಶದ ಭದ್ರತಾ ಪಡೆಗಳ ಕಾರ್ಯಕ್ಷಮತೆಯನ್ನು ಬಲಪಡಿಸುವಲ್ಲಿ ರಕ್ಷಣಾ ನಿರ್ವಹಣಾ ಕಾಲೇಜು ಮಹತ್ವದ ಪಾತ್ರ ವಹಿಸುತ್ತಿದೆ. ಹೆಚ್ಚುತ್ತಿರುವ ರಕ್ಷಣಾ ಸಾಮರ್ಥ್ಯ ರಾಜತಾಂತ್ರಿಕ ಮತ್ತು ಮಿಲಿಟರಿ ಪಾಲುದಾರಿಕೆಗಳನ್ನು ಸದೃಢಪಡಿಸಲು

ಮತ್ತು ರಕ್ಷಣಾ ರಫ್ತುಗಳನ್ನು ವೃದ್ಧಿಸಲು ಸಹಕಾರಿಯಾಗಿದೆ ಎಂದು ಹೇಳಿದರು. ರಾಷ್ಟ್ರೀಯ ಭದ್ರತೆಯಲ್ಲಿ ಮುಂದುವರಿದ ತಂತ್ರಜ್ಞಾನಗಳ ಪ್ರಭಾವ ಅಗಾಧವಾಗಿದೆ. ಸಾಂಪ್ರದಾಯಿಕ ಯುದ್ಧ ಮಾದರಿಗೆ ವಿನೂತನ ತಂತ್ರಜ್ಞಾನಗಳು ಸವಾಲೊಡ್ಡುತ್ತಿವೆ. ಭಾರತ, ತನ್ನ ರಕ್ಷಣಾ ಪಡೆಗಳ ಸಾಮರ್ಥ್ಯ ವೃದ್ಧಿಸಲು ಸಮಗ್ರ ವಿಧಾನಕ್ಕೆ ಆದ್ಯತೆ ನೀಡುತ್ತಿದೆ. ಕೃತಕ ಬುದ್ಧಿಮತ್ತೆ, ಡ್ರೋನ್, ಸೈಬರ್ ಸಾಮರ್ಥ್ಯ ಮತ್ತು ಬಾಹ್ಯಾಕಾಶ ರಕ್ಷಣಾ ತಂತ್ರಜ್ಞಾನಗಳಂತಹ ಅತ್ಯಾಧುನಿಕ ವಿಧಾನಗಳನ್ನು ಅಳವಡಿಸಿಕೊಳ್ಳುತ್ತಿದೆ ಎಂದು ತಿಳಿಸಿದರು. ಭಾರತ ಸರ್ಕಾರ, ರಕ್ಷಣಾ ಪಡೆಗಳ ಬಲವರ್ಧನೆಗೆ ಹಲವಾರು ಕ್ರಮಗಳನ್ನು ಕೈಗೊಂಡಿದೆ. ಮೇಕ್ ಇನ್ ಇಂಡಿಯಾ ಅಭಿಯಾನ ರಕ್ಷಣಾ ಸಲಕರಣೆಗಳ ಉತ್ಪಾದನೆಯಲ್ಲಿ ಮಹತ್ವದ ಪಾತ್ರ ವಹಿಸಿದೆ. ಪರಿಣಾಮ, ದೇಶೀಯ ರಕ್ಷಣಾ ಸಲಕರಣೆಗಳ ಉತ್ಪಾದನೆ ಹೆಚ್ಚಿದ್ದು, ಆತ್ಮನಿರ್ಭರ ಭಾರತದತ್ತ ಯಶಸ್ವಿಯಾಗಿ ದಾಪುಗಾಲಿಡಲಾಗಿದೆ ಎಂದು ಹೇಳಿದರು.

**<><*<><>*><>**

ಸಶಸ್ತ್ರ ಸೀಮಾ ಬಲ್ ಸಂಸ್ಥಾಪನಾ ದಿನವಾದ ಇಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪಡೆಯ ಎಲ್ಲಾ ಅಮರ ಹುತಾತ್ಮರಿಗೆ ಗೌರವ ಸಲ್ಲಿಸಿದರು. ಇದೇ ವೇಳೆ ಸಶಸ್ತ್ರ ಸೀಮಾ ಬಲದ ಸಿಬ್ಬಂದಿ ಮತ್ತು ಅವರ ಕುಟುಂಬ ಸದಸ್ಯರಿಗೆ ಸಚಿವರು ಶುಭ ಹಾರೈಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅಮಿತ್ ಶಾ ಅವರು, ಎಸ್.ಎಸ್.ಬಿ ಇಂಡಿಯಾ ತನ್ನ ತ್ಯಾಗ ಮತ್ತು ಶೌರ್ಯದ ಮೂಲಕ ರಾಷ್ಟ್ರೀಯ ಭದ್ರತೆ ಮತ್ತು ಸಾರ್ವಜನಿಕ ಸೇವೆಯನ್ನು ಅತ್ಯುನ್ನತಗೊಳಿಸಿದೆ ಎಂದು ಹೇಳಿದರು. ಗಡಿಗಳಲ್ಲಿ ಅಪರಾಧಗಳು ಮತ್ತು ಅಕ್ರಮ ನುಸುಳುವಿಕೆಯನ್ನು ತಡೆಯಲು ಗಡಿ ಭದ್ರತೆ ಮತ್ತು ಕಣ್ಗಾವಲು ಸಮರ್ಪಿತವಾಗಿರುವ ಕೆಚ್ಚೆದೆಯ ಸೈನಿಕರ ಪ್ರಯತ್ನಗಳು ಶ್ಲಾಘನೀಯ. ಸೇನೆಯ ವೀರ ಸೈನಿಕರು ಏಕಕಾಲದಲ್ಲಿ ಗಡಿ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳು ಮತ್ತು ದೇಶದ ಭದ್ರತೆಯನ್ನು ವೇಗಗೊಳಿಸುವ ಮೂಲಕ ರಾಷ್ಟ್ರ ನಿರ್ಮಾಣಕ್ಕೆ ನಿರಂತರವಾಗಿ ಕೊಡುಗೆ ನೀಡುತ್ತಿದ್ದಾರೆ ಎಂದು ಸಚಿವ ಅಮಿತ್ ಶಾ ಪ್ರತಿಪಾದಿಸಿದರು.

**ಧ್ವನಿ: ಅಮಿತ್ ಶಾ**

**<><*<><>*><>**

ರಾಜಸ್ಥಾನದ ಜೈಪುರ-ಅಜ್ಮೀರ್ ಹೆದ್ದಾರಿಯಲ್ಲಿ ಗ್ಯಾಸ್ ಟ್ಯಾಂಕರ್ ಬೆಂಕಿ ಅವಘಡದಲ್ಲಿ ಮೃತಪಟ್ಟವರ ಸಂಖ್ಯೆ ಒಂಭತ್ತಕ್ಕೆ ಏರಿಕೆಯಾಗಿದೆ. ಘಟನೆಯಲ್ಲಿ ೩೧ ಮಂದಿ ಗಾಯಗೊಂಡಿದ್ದಾರೆ. ಅಜ್ಮೀರ್ ಹೆದ್ದಾರಿಯ ವರ್ತುಲ ರಸ್ತೆಯ ಬಳಿ ಗ್ಯಾಸ್ ಟ್ಯಾಂಕರ್‌ವೊಂದು, ಟ್ರಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಬೆಂಕಿ ಹೊತ್ತಿಕೊಂಡು, ಸಮೀಪದ ಹಲವಾರು ವಾಹನಗಳು ಸುಟ್ಟು ಕರಕಲಾದ ಘಟನೆ ಇಂದು ಬೆಳಗ್ಗೆ ೬ ಗಂಟೆ ಸುಮಾರಿಗೆ ನಡೆದಿದೆ. ಘಟನೆಯಲ್ಲಿ ೨೯ ಟ್ರಕ್‌ಗಳು ಮತ್ತು ೨ ಸ್ಲೀಪರ್ ಬಸ್‌ಗಳು ಸೇರಿದಂತೆ ಒಟ್ಟು ೪೦ ವಾಹನಗಳಿಗೆ ಹಾನಿಯಾಗಿವೆ. ಘಟನೆಯಲ್ಲಿ ಮೃತಪಟ್ಟ ಕುಟುಂಬಗಳಿಗೆ ಪ್ರಧಾನಿ ನರೇಂದ್ರ ಮೋದಿ, ರಾಜಸ್ಥಾನ ಮುಖ್ಯಮಂತ್ರಿ ಭಜನ್ ಲಾಲ್ ಶರ್ಮಾ ಸೇರಿದಂತೆ ಗಣ್ಯರು ಸಂತಾಪ ಸೂಚಿಸಿದ್ದಾರೆ. ಇದೇ ವೇಳೆ ಮೃತಪಟ್ಟ ಕುಟುಂಬಗಳಿಗೆ ತಲಾ ೨ ಲಕ್ಷ ರೂಪಾಯಿ ಮತ್ತು ಗಾಯಗೊಂಡವರಿಗೆ ತಲಾ ೫೦ ಸಾವಿರ ರೂಪಾಯಿಗಳ ಪರಿಹಾರವನ್ನು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೬.೦೫ ಕ್ಕೆ**